
# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ

ಚಿಂತಕ, ಲೇಖಕ ಧರ್ಮಪಾಲ್ ಅವರ ಕುರಿತು "ಪರಂಪರಾಧಾರಿತ ಅಭ್ಯುದಯ ದರ್ಶನ – ಧರ್ಮಪಾಲ್ ದೃಷ್ಟಿ" ಪುಸ್ತಕವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಘಚಾಲಕರಾದ ಶ್ರೀ ವಿ. ನಾಗರಾಜರವರು ಬೆಂಗಳೂರಿನ ಚನ್ನೇನಹಳ್ಳಿಯ ಜನಸೇವಾ ವಿದ್ಯಾ ಕೇಂದ್ರದಲ್ಲಿ ಬಿಡುಗಡೆಗೊಳಿಸಿದರು. ಆರ್.ಎಸ್.ಎಸ್ ನ ಸಹ ಸರಕಾರ್ಯವಾಹರಾದ ಶ್ರೀ ಮುಕುಂದ ಹಾಗೂ ಅಂಕಣಕಾರರಾದ ಡಾ.ರೋಹಿಣಾಕ್ಷ ಶಿರ್ಲಾಲು ಉಪಸ್ಥಿತರಿದ್ದರು.


ಸಂಪುಟ : 43 | ಸಂಚಿಕೆ : 14 | ಪ್ಲವ – ಮಾಘ | ಕಲಿಯುಗಾಬ್ದ 5123 | 01-03-2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಪರಿಸರ – ನಮ್ಮ ದೃಷ್ಟಿಕೋನ

**ಜನವರಿ 1, 2022 ರಂದು ಬೆಂಗಳೂರಿನ ಬಸವನಗುಡಿಯ ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ 'ಪರಿಸರದ ಕುರಿತು ನಮ್ಮ ದೃಷ್ಟಿಕೋನ' ಎಂಬ ವಿಷಯದ ಕುರಿತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪರಮ ಪೂಜನೀಯ ಸರಸಂಘಚಾಲಕರಾದ ಮಾನನೀಯ ಶ್ರೀ ಮೋಹನ ಭಾಗವತ್ ಅವರು ನೀಡಿದ ಉಪನ್ಯಾಸದ ಸಾರರೂಪ.**

ಓಝೋನ್ ಪದರದಲ್ಲಿ ಬಿರುಕು ಬಿಟ್ಟಿರುವುದರಿಂದ ಜಾಗತಿಕ ತಾಪಮಾನದ ಅಪಾಯ ಬಲವಾಗುತ್ತಿದೆ. ಎಲ್ಲೆಡೆ ಮಾಲಿನ್ಯ ಆವರಿಸಿಕೊಂಡಿದೆ. ಅನ್ನ, ನೀರು, ಭೂಮಿ, ವನಸ್ಪತಿ ಎಲ್ಲವೂ ವಿಷಮಯವಾಗಿದೆ. ಮಾಲಿನ್ಯದ ಅಪಾಯ ಬಹಳಷ್ಟು ಹೆಚ್ಚಿದೆ. ಪ್ರಕೃತಿ ಕೂಡ ವಿಚಿತ್ರವಾಗಿಬಿಟ್ಟಿದೆ. ಋತುಮಾನದ ಪ್ರಕಾರವೇ ನಮ್ಮ ಬದುಕು ಸಾಗುತ್ತಿತ್ತು. ಆದರೀಗ ಋತುಮಾನಗಳ ಕ್ರಮವೇ ತಪ್ಪಿಹೋಗಿದೆ ಎಂದು ಭಾಸವಾಗುತ್ತಿದೆ. ಪರಿಸರ ಮಾಲಿನ್ಯದ ಪರಿಣಾಮವಾಗಿಯೇ ಇಂದು ಹಲವು ಬಗೆಯ ರೋಗರುಜಿನಗಳು ಹುಟ್ಟಿಕೊಂಡಿವೆ,

ಉಳಿದ ರೋಗಗಳಿಗೂ ಮನುಷ್ಯನ ಶರೀರ ತೆರೆದ ಮೈದಾನವಾಗಿಬಿಟ್ಟಿದೆ. ಹೀಗಾಗಿ ಇಡೀ ವಿಶ್ವವೇ ಚಿಂತಿತವಾಗಿದೆ. ಆದರೆ ಚಿಂತಿಸುವುದೊಂದೇ ಗೋಚರಿಸುತ್ತಿದೆಯೇ ಹೊರತು ಬೇರೆ ಏನೂ ಕಂಡುಬರುತ್ತಿಲ್ಲ. ಬ್ರೆಜಿಲ್ನಲ್ಲಿ ಭೂಸಮ್ಮೇಳನ ಜರುಗಿದಾಗಿನಿಂದ ಹಿಡಿದು ಗ್ಲಾಸ್ಗೋ ಸಮ್ಮೇಳನದವರೆಗೆ ಬಹಳಷ್ಟು ಘೋಷಣೆಗಳು ಮೊಳಗಿದವು. ಬಹಳಷ್ಟು ದೃಢನಿರ್ಧಾರಗಳನ್ನು ಕೈಗೊಳ್ಳಲಾಯಿತು.ಸುಸ್ಥಿರತೆಯ ಕುರಿತು ಮಾತುಕತೆಗಳು ನಡೆದವು. ಕಾರ್ಬನ್ ಕ್ರೆಡಿಟ್ ಕಡಿಮೆ ಮಾಡುವ ಮಾತು ಕೇಳಿಬಂತು. ಆದರೆ ಯಾವ ದೇಶಗಳಲ್ಲಿ ಇವೆಲ್ಲ ನಡೆದಿವೆಯೋ ಆ ದೇಶಗಳಲ್ಲಿ ಇವುಗಳನ್ನು ಸಾಧಾರಣ ಕೃತಿರೂಪಕ್ಕೆ ತರುವ ಪ್ರಯತ್ನ ನಗಣ್ಯವಾಗಿದೆ ಮತ್ತು ಯಾರು ಈ ವಿಷಯದಲ್ಲಿ ದೋಷಿಗಳಲ್ಲವೋ ಆ ದೇಶಗಳ ಮೇಲೆ ಹೆಚ್ಚಿನ ಒತ್ತಡವಿದೆ.

ಪರಿಸರ ರಕ್ಷಣೆಯ ವಿಚಾರ ಮಾಡಿದ್ದಾದರೆ ಅಭಿವೃದ್ಧಿಗೆ ಅಡ್ಡಿಯಾಗಬಹುದೆಂಬ ಆತಂಕವೂ ಆ ದೇಶಗಳನ್ನು ಕಾಡುತ್ತಿದೆ. 'ನೀವು ನಿಮ್ಮ ವಿಕಾಸವನ್ನು ತಡೆಯಿರಿ' ಎಂದು ವಿಕಾಸಶೀಲ ದೇಶಗಳ ಮೇಲೆ ವಿಕಸಿತ ದೇಶಗಳು ಒತ್ತಡ ಹೇರುತ್ತಿವೆ. ಸ್ವಯಂ ವಿಕಾಸ ಸಾಧಿಸಿದ ಬಳಿಕ ಈಗ ಅವು ನಮ್ಮನ್ನು ಹತ್ತಿಕ್ಕತೊಡಗಿವೆ!

ಈ ಸಮಸ್ಯೆಗೆ ಹಾಗಿದ್ದರೆ ನಿಜವಾದ ಪರಿಹಾರ ಏನು? 'ಅಭಿವೃದ್ಧಿಯ ಯೋಜನೆಗಳಿಗಾಗಿ ಪರಿಸರ ನಾಶ ತಪ್ಪಿದ್ದಲ್ಲ' ಎಂಬುದು ಇದು ಇಂದಿನ ಜಗತ್ತಿನ ನಿಯಮವಾಗಿದೆ. ಪರಿಸರವನ್ನು ಸುಸ್ಥಿತಿಯಲ್ಲಿಡಬೇಕೆಂದಾದರೆ ಅಭಿವೃದ್ಧಿ ಕ್ರಮಗಳನ್ನು ಸ್ಥಗಿತಗೊಳಿಸಿ ಎಂದೂ ಹೇಳಲಾಗುತ್ತಿದೆ.

ಇದುವರೆಗೆ ಮನುಷ್ಯ 'ಪ್ರವಹಿಸುವ ಇಂಧನ' ಅವಲಂಬಿಸಿ ಕಾರ್ಯ ನಿರ್ವಹಿಸುತ್ತಿದ್ದ. ಈಗ ಆತ ಸಂಚಿತ ಅಥವಾ ಶೇಖರಿಸಿದ ಇಂಧನದ ಸಂಗ್ರಹವನ್ನು ತೆರೆದುಬಿಟ್ಟ ಮತ್ತು ಅದನ್ನು ಪೂರ್ತಿ ಖಾಲಿ ಮಾಡಲು ಆರಂಭಿಸಿದ. ಕಲ್ಲಿದ್ದಲು, ತೈಲ ಮುಂತಾದ ಸಂಚಿತ ಇಂಧನದ ಸಂಗ್ರಹವನ್ನು ಮತ್ತೆ ತುಂಬಿಸಲು ಸಾಧ್ಯವಿಲ್ಲ. ಪ್ರಕೃತಿಯಲ್ಲಿ ಅಂತಹ ಯಾವುದೇ ವ್ಯವಸ್ಥೆ ಇರುವುದಿಲ್ಲ. ಸೂರ್ಯನ ಬೆಳಕು, ನೀರು, ಗಾಳಿ ಮುಂತಾದವನ್ನು ನಾವು ಉಪಯೋಗಿಸಿದಷ್ಟೂ ಅವು ನಿರಂತರವಾಗಿ ನಮಗೆ ದೊರಕುತ್ತಲೇ ಇರುತ್ತವೆ. ಸಂಚಿತ ಇಂಧನವನ್ನು ಬಳಕೆ ಮಾಡುತ್ತಿದ್ದರೆ ಮನುಷ್ಯನಿಗೆ ಹಾನಿಕಾರಕವಾಗುವ ಸಂಗತಿ ಹೆಚ್ಚುತ್ತದೆ. ಹಾಗಿದ್ದರೂ ನಾವು ಸಂಚಿತ ಇಂಧನವನ್ನು ಔಚಿತ್ಯ ಮೀರಿ ಬಳಕೆ ಮಾಡಿದೆವು. ಇದರಿಂದಾಗಿಯೇ ನಾವೀಗ ಅಪಾಯದ ಶಿಖರದ ಮೇಲೆ ನಿಂತಿದ್ದೇವೆ. ಈ ವಿಷಯಕ್ಕೆ ಸಂಬಂಧಿಸಿ 'ಫ್ಯೂಚರ್ ಶಾಕ್' ಎಂಬ ಪುಸ್ತಕವೂ ಪ್ರಕಟವಾಗಿತ್ತು. ನಾವು ಮತ್ತೆ ಹರಿಯುವ ಇಂಧನದ ಬಳಕೆಯತ್ತ ಸಾಗಬೇಕಾಗುತ್ತದೆ ಹಾಗೂ ಸುಸ್ಥಿರತೆಯ ಬಗ್ಗೆ ಗಮನಹರಿಸಬೇಕಾಗುತ್ತದೆ ಎಂದು ಆ ಪುಸ್ತಕದಲ್ಲಿ ಹೇಳಲಾಗಿತ್ತು. ಈ ಸಲಹೆಗಳ ಪದಗಳಲ್ಲಿ ವ್ಯತ್ಯಾಸವಿರಬಹುದು. ಆದರೆ ಸಂದೇಶ ಮಾತ್ರ ಅದೇ ಆಗಿದೆ. ಆದರೆ ಇಷ್ಟೆಲ್ಲ ಆದರೂ ಏನಾಗಬೇಕಿತ್ತೋ ಆ ರೀತಿ ಆಗುವುದು ಕಂಡುಬರುತ್ತಿಲ್ಲ. ಏಕೆ ಕಂಡುಬರುತ್ತಿಲ್ಲ? ಕಾರಣವಿಷ್ಟೇ; ಯಾವ ಕಾರಣಕ್ಕಾಗಿ ನಾವು ಸಂಚಿತ ಅಥವಾ ಶೇಖರಿಸಿದ ಇಂಧನದ ಬಳಕೆ ಮಾಡಿದೆವೋ ಆ ಬಗ್ಗೆ ಈಗಲೂ ನಾವು ತಲೆ ಕೆಡಿಸಿಕೊಂಡಿಲ್ಲ.

ಉದಾಹರಣೆಗಾಗಿ, ನಮ್ಮಲ್ಲಿ ಚರಕ ಸಂಹಿತೆಯಲ್ಲಿ ಹೇಳಿರುವುದೇನೆಂದರೆ ಮನುಷ್ಯನಿರಲಿ, ಜೀವಿಯಿರಲಿ ಅಥವಾ ಜಗತ್ತೇ ಆಗಿರಲಿ, ಅವೆಲ್ಲವೂ ಸಮಾನ ಪಂಚಮಹಾಭೂತ ಮತ್ತು ಚೈತನ್ಯ ತತ್ತ್ವದಿಂದ ಮಾಡಲ್ಪಟ್ಟಿವೆ. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ – ಎಲ್ಲ ಪದಾರ್ಥಗಳ ಆಧಾರ ಇವೇ ಆಗಿವೆ. ಇದರಿಂದಲೇ ಎಲ್ಲ ವಿಷಯಗಳೂ ನಿರ್ಧರಿತವಾಗುತ್ತದೆ. ಚೇತನದಿಂದ ಚೈತನ್ಯ ಪ್ರಾಪ್ತವಾಗುತ್ತದೆ. ಎಲ್ಲವೂ ಅದೇ ರೀತಿ ಮಾಡಲ್ಪಟ್ಟಿವೆ. ಕಾಲ, ಅರ್ಥ ಮತ್ತು ಕರ್ಮಗಳಲ್ಲಿ ಅತಿಯೋಗ, ಅಯೋಗ ಅಥವಾ ಮಿಥ್ಯಾಯೋಗ ಉಂಟಾಗುವುದರಿಂದ ಇವುಗಳಲ್ಲಿ ವಿಕೃತಿಗಳು ನುಸುಳುತ್ತವೆ. ಕಾಲಕ್ಕೆ ಅನುಗುಣವಾಗಿ ಮನುಷ್ಯ ಬದುಕಲು ಪ್ರಯತ್ನಿಸುತ್ತಾನೆ. ಹೀಗೆ ಬದುಕಲು ಪ್ರಯತ್ನಿಸುವಾಗ ಯಾವುದನ್ನು ಮಾಡಬಾರದಿತ್ತೋ ಅದನ್ನು ಮಾಡುವ ಪ್ರಯತ್ನವೂ ನಡೆಯುತ್ತದೆ. ಅದನ್ನೇ ಮಿಥ್ಯಾಯೋಗ ಎನ್ನಲಾಗುತ್ತದೆ. ಯಾವುದನ್ನು ಮಾಡಬೇಕಿತ್ತೋ ಅದನ್ನು ಮಾಡದಿದ್ದರೆ ಅದನ್ನು ಅಯೋಗ ಎನ್ನಲಾಗುತ್ತದೆ. ಯಾವುದನ್ನು ಕಡಿಮೆ ಮಾಡಬೇಕಿತ್ತೋ ಅದನ್ನು ಅತಿಹೆಚ್ಚು ಮಾಡಿದರೆ ಅದನ್ನು ಅತಿಯೋಗ ಎನ್ನಲಾಗುತ್ತದೆ. ಇದೇ ರೀತಿ ಮನುಷ್ಯನಿಗೆ ಕೆಲವು ಬಯಕೆಗಳಿರುತ್ತವೆ. ಅದನ್ನು ಪೂರ್ತಿಗೊಳಿಸಲು ಕೆಲವು ಸಾಧನಗಳ ಪ್ರಯೋಜನ ಪಡೆಯುತ್ತಾನೆ. ಅದನ್ನು ಅರ್ಥ ಎನ್ನಲಾಗುತ್ತದೆ. ತನ್ನ ಹುಚ್ಚುತನದ ಕಾರಣಕ್ಕಾಗಿ ಆತ ಅರ್ಥದಲ್ಲೂ, ಕರ್ಮದಲ್ಲೂ ಅತಿಯೋಗ, ಅಯೋಗ ಹಾಗೂ ಮಿಥ್ಯಾಯೋಗ ಮಾಡುತ್ತಾನೆ. ಇದರಿಂದಾಗಿ ವಿಕೃತಿ ಮತ್ತು ಅಸಂತುಲನ ಉತ್ಪನ್ನವಾಗುತ್ತವೆ.

ಧೀ, ಧೃತಿ ಮತ್ತು ಸ್ಮೃತಿಯಲ್ಲಿ ಭ್ರಮೆ ಮೂಡುವುದರಿಂದಾಗಿ ಹೀಗಾಗುತ್ತದೆ. ಧೀ ಎಂದರೆ ಮನುಷ್ಯನ ಬುದ್ಧಿಶಕ್ತಿ. ಬುದ್ಧಿ ಕೆಲವೊಮ್ಮೆ ತಪ್ಪು ವಿಚಾರ ಮಾಡುತ್ತದೆ ಅಥವಾ ತಪ್ಪುದಾರಿಯಲ್ಲಿ ಕೊಂಡೊಯ್ಯುತ್ತದೆ. ಧೃತಿ ಎಂದರೆ ದೃಢತೆಯಿಂದಿರುವುದು. ಭಯದ ಕಾರಣದಿಂದಾಗಿ ವ್ಯಕ್ತಿ ತಪ್ಪು ಮಾಡುತ್ತಾನೆ. ದುರಾಸೆಯಿಂದಲೂ ತಪ್ಪೆಸಗುತ್ತಾನೆ. ಕೆಲವು ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ ರೈಲುಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿತ್ತು. ಈ ಸಂಕಟದ ಸನ್ನಿವೇಶ ಏಕೆ ಉಂಟಾಯಿತು? ಅಲ್ಲಿರುವ ಭೂಮಿ ಒಣಭೂಮಿಯಾಗಿತ್ತು. ಕಡಿಮೆ ನೀರು ಬಳಸಿ ಅಲ್ಲಿ ಪಾರಂಪರಿಕ ಪದ್ಧತಿಯ ಮೂಲಕ ಬೆಳೆ ತೆಗೆಯಲಾಗುತ್ತಿತ್ತು. ಜನರು ಇದನ್ನೇ ಅನುಸರಿಸಿಕೊಂಡು ಹೋಗಬೇಕಿತ್ತು. ಆದರೆ ಜನರು ಈ ಸಂಯಮವನ್ನು ಮೀರಿ ಅಲ್ಲಿ ಕಬ್ಬಿನ ಬೆಳೆ ತೆಗೆಯಲು ಹೊರಟರು. ಕಬ್ಬಿನ ಬೆಳೆಗೆ ಅತ್ಯಧಿಕ ನೀರಿನ ಅಗತ್ಯವಿದೆ. ಹೀಗಾಗಿ ಅಲ್ಲಿ ಅಂತರ್ಜಲದ ಮಟ್ಟ ತೀರಾ ಕೆಳಗೆ ಕುಸಿಯಿತು. ಕಬ್ಬು ಬೆಳೆಯುವುದರಿಂದ ಹೆಚ್ಚಿನ ಹಣ ಸಿಗುತ್ತದೆ ಎಂಬ ದುರಾಸೆಯಿಂದ ತಾವಾಗಿಯೇ ಸಮಸ್ಯೆಯನ್ನು ಮೈಮೇಲೆಳೆದುಕೊಂಡರು. ನಾವು ದೃಢತೆಯನ್ನು ಕಳೆದುಕೊಂಡಿದ್ದೇವೆ. ಪಂಜಾಬಿನಲ್ಲಿ ಹೊಲದಿಂದ ಅತ್ಯಧಿಕ ಹಣ ಸಂಪಾದನೆಗಾಗಿ ಜಮೀನಿಗೆ ಅತಿಹೆಚ್ಚು ರಾಸಾಯನಿಕವನ್ನು ಬಳಸಲಾಯಿತು. ಅದರ ದುಷ್ಪರಿಣಾಮ ಕಂಡುಬಂದಿದೆ. ಇಂದು ಪಂಜಾಬಿನಿಂದ ರೈಲು ತುಂಬಾ ಕ್ಯಾನ್ಸರ್ ರೋಗಿಗಳು ಜೈಪುರಕ್ಕೆ ಬರುತ್ತಿದ್ದಾರೆ. ದೃಢತೆ (ಧೃತಿ) ಕಳೆದುಕೊಂಡಿದ್ದರ ಉದಾಹರಣೆ ಇದು.

ಇದೇ ರೀತಿ ನಮ್ಮ ಸ್ಮೃತಿಯೂ ಭ್ರಷ್ಟವಾಗುತ್ತದೆ. ನಾವು ತಪ್ಪಾಗಿ ನಡೆದುಕೊಳ್ಳುತ್ತೇವೆ. ಒಮ್ಮೆ ಕೆಲವರು ವಿನೋಬಾ ಭಾವೆಯವರನ್ನು ಭೇಟಿಯಾಗಲು ಹೋಗಿದ್ದರು. ನಮ್ಮ ಜಮೀನಿನ ಫಸಲಿನ ಮೇಲೆ ಬಹಳ ಹುಳುಗಳು ಮುತ್ತಿಬಿಟ್ಟಿವೆ ಎಂದು ಅವರು ವಿನೋಬಾಜೀಯವರ ಬಳಿ ತಮ್ಮ ಕೊರಗು ಹೇಳಿಕೊಂಡರು. ಆಗ ವಿನೋಬಾಜೀಯವರು, ನೀವೆಲ್ಲರೂ ನಿಮ್ಮ ಗದ್ದೆಗಳಿಂದ ಕಪ್ಪೆಗಳನ್ನು ಹಿಡಿದು ರಫ್ತು ಮಾಡುತ್ತಿದ್ದೀರಿ. ಇದರಿಂದಾಗಿಯೇ ಹುಳುಗಳು ಆಕ್ರಮಣ ನಡೆಸಿವೆ ಎಂದರು. ಈ ಸಂಗತಿ ಯಾರ ಗಮನಕ್ಕೂ ಬಂದಿರಲಿಲ್ಲ. ಆದರೆ ಕ್ರಮೇಣ ಈ ಸಂಗತಿ ನಿಜವೆಂದು ಅರಿವಾಗತೊಡಗಿತು. ಏಕೆಂದರೆ ಗದ್ದೆಗೆ ಹುಳುಗಳು ಬಂದಾಗ ಕಪ್ಪೆಗಳು ಅವುಗಳನ್ನು ತಿಂದುಹಾಕುತ್ತಿದ್ದವು. ಕಪ್ಪೆಗಳನ್ನು ಹಿಡಿದು



ಪ್ರಯೋಗಾಲಯಗಳಿಗೆ ತಲುಪಿಸುತ್ತಿದ್ದುದರಿಂದ ರೈತರಿಗೆ ಹಣ ಸಿಗುತ್ತಿತ್ತು. ಹೀಗೆ ಮಾಡುವ ರೈತರ ಗದ್ದೆಗಳಲ್ಲಿ ಹುಳುಗಳ ಸಂಖ್ಯೆ ಹೆಚ್ಚಾಗಿತ್ತು. ಏಕೆಂದರೆ ಈ ಹುಳುಗಳನ್ನು ತಿಂದುಹಾಕುವ ಕಪ್ಪೆಗಳು ಅಲ್ಲಿರಲಿಲ್ಲ. ಇಂತಹ ಅಸಮತೋಲನದಿಂದಾಗಿಯೇ ಪರಿಸರಕ್ಕೆ ಹಾನಿಯಾಗುತ್ತದೆ.

ಪರಿಸರ ಸಮಸ್ಯೆ ಕುರಿತು ಮೇಲುಮೇಲಿನ ಚರ್ಚೆ, ವಾದಗಳಿಂದ ಏನೂ ಬದಲಾವಣೆ ಆಗಲಾರದು. ನಾವು ಕೇವಲ ಬೊಬ್ಬೆ ಹೊಡೆಯುತ್ತೇವೆ. ಆದರೆ ನಮ್ಮ ಸ್ವಾರ್ಥವನ್ನು ಜೋಪಾನವಾಗಿ ಕಾಪಾಡುತ್ತೇವೆ. ನಾವು ನಮ್ಮ ಸ್ವಾರ್ಥವನ್ನು ತೊರೆಯಲು ಸಿದ್ಧರಿರುವುದಿಲ್ಲ. ಆದರೆ ಜನರಿಗೆ ಅವರ ಉದ್ಯೋಗವನ್ನು ಬಂದ್ ಮಾಡಲು ಹೇಳುತ್ತೇವೆ. ಇಂತಹ ಪ್ರವೃತ್ತಿಯಿಂದ ಯಾವ ಪ್ರಯೋಜನವೂ ಆಗದು. ಏಕೆಂದರೆ ಈ ಅಪಾಯ ಎಲ್ಲರ ಮೇಲಿದೆ. ಚರಾಚರ ವಿಶ್ವವೇ ಇದನ್ನು ಅನುಭವಿಸುತ್ತಿದೆ. ಆಪತ್ತು ಸಂಭವಿಸಿದಾಗ ಪ್ರಾಣಿಗಳು ಕೂಡ ತಮ್ಮ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತವೆ. ಆದರೆ ಬುದ್ಧಿಶಕ್ತಿ ಹೊಂದಿರುವ ಮನುಷ್ಯ, ಅದೇ ಕಾರಣಕ್ಕಾಗಿ ದಾರಿ ತಪ್ಪುತ್ತಾನೆ. ತಪ್ಪು ಕೆಲಸ ಮಾಡುತ್ತಾನೆ. ಇದರಿಂದಾಗಿ ಎಲ್ಲರೂ ಒಟ್ಟಿಗೇ ಸಾಯುತ್ತಾರೆ. ಬದುಕಿ ಉಳಿಯಬೇಕಾದರೆ ಎಲ್ಲರೂ ಬದಲಾಗಲೇಬೇಕು. ಆದರೆ ಇದನ್ನು ಸಾಧಿಸುವುದಾದರೂ ಹೇಗೆ?

ಮೊದಲನೆಯದಾಗಿ, ನಾವು ಬಹಳಷ್ಟು ಮುಂದೆ ಬಂದಿದ್ದೇವೆ. ಈಗ ನಾವು ನಿಧಾನವಾಗಿ ಹಿಂದಕ್ಕೆ ಹೋಗಬೇಕಾಗಿದೆ. ಇವತ್ತಿನಿಂದಲೇ ಇದರ ಪ್ರಾರಂಭ ಮಾಡಬೇಕಿದೆ. ಎರಡನೆಯದಾಗಿ, ನಾವು ನಮ್ಮ ಸ್ವಭಾವಗಳನ್ನು ಬದಲಿಸಿಕೊಳ್ಳಬೇಕಾಗಿದೆ. ಆಧುನಿಕ ವಿಜ್ಞಾನದಿಂದ ಪ್ರಾಪ್ತವಾದ ಭೌತಿಕ ಸುಖ ಸೌಲಭ್ಯಗಳನ್ನು ಏಕಾಏಕಿ ನಾವು ತ್ಯಜಿಸಬೇಕೆ? ಆ ರೀತಿ ನಾವು ಯೋಚಿಸುವುದಕ್ಕೂ ಸಾಧ್ಯವಿಲ್ಲ. ಮತ್ತು ಮಾಡುವುದಕ್ಕೂ ಸಾಧ್ಯವಿಲ್ಲ. ವಿನಾಶವಾದರೋ ಅದೇ ತ್ವರಿತಗತಿಯಲ್ಲೇ ಜರುಗುತ್ತದೆ. ಹಾಗಾಗಿ, ಅಭಿವೃದ್ಧಿಯೂ ಆಗಬೇಕು ಹಾಗೂ ಪರಿಸರವೂ ರಕ್ಷಿಸಲ್ಪಡಬೇಕು. ಈ ರೀತಿ ಎಲ್ಲವೂ ಒಟ್ಟಾಗಿ ಸಾಗಬೇಕಾಗಿದೆ. ಆಗಿರುವ ನಷ್ಟ ಮರಳಿ ಬರಬೇಕು ಹಾಗೂ ಆಗಿರುವ ಲಾಭವೂ ಜತೆಗೇ ಇರಬೇಕು. ಹೀಗೆ ಇವೆಲ್ಲವನ್ನೂ ಒಟ್ಟಿಗೆ ನಿರ್ವಹಿಸಬೇಕಾದರೆ ಇಲ್ಲಿಯವರೆಗಿನ ನಮ್ಮ ದೃಷ್ಟಿಕೋನದಲ್ಲಿ ಪರಿವರ್ತನೆಯನ್ನು ತರಬೇಕಾಗಿದೆ. ನಮ್ಮ ಪರಿಸರ ದೃಷ್ಟಿಕೋನಕ್ಕೆ ಸಂಬಂಧಿಸಿ ಕಾಲಕ್ಕೆ ತಕ್ಕಂತೆ ಯೋಚನೆಗಳನ್ನು ಮಾಡಬೇಕಾಗಿದೆ.

## ಸಂಸ್ಮರಣೆ

# ಹರಪನಹಳ್ಳಿ ಭೀಮವ್ವ (6 ಜುಲೈ 1823 – 11 ಜನವರಿ 1903)

ಶ್ರೇಷ್ಠ ಮಹಿಳಾ ಹರಿದಾಸರೆಂದೇ ಗುರುತಿಸಿಕೊಂಡ ಹರಪನಹಳ್ಳಿ ಭೀಮವ್ವನವರು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ನಾರಾಯಣ ದೇವರಕೆರೆಯಲ್ಲಿ 1823ರ ಜುಲೈ 6ನೇ ತಾರೀಖು ನರೇಭಟ್ಟರ ವಂಶದ ರಘುನಾಥಾಚಾರ್ಯ ಮತ್ತು ರಾಘಮ್ಮ ದಂಪತಿಗಳ ಮಗಳಾಗಿ ಜನಿಸಿದರು. ಇವರ ಹುಟ್ಟುಹೆಸರು ಕಮಲಾಕ್ಷಿ. ಕೂಸು ಅಳತೊಡಗಿದಾಗಳೆಲ್ಲಾ ತೊಟ್ಟಿಲು ತೂಗುತ್ತಾ ಹರಿನಾಮ ಹಾಡಿದರೆ ಕೂಡಲೇ ಸುಮ್ಮನಾಗುತ್ತಿತ್ತು.

ಆರು ವರ್ಷದವಳಿರುವಾಗಲೇ ಆಕೆಗೆ ಶ್ರೀ ವೇದವ್ಯಾಸ ದೇವರ ದರ್ಶನವಾಗಿತ್ತು. ಅಂದಿನಿಂದಲೇ ಅವಳಲ್ಲಿ ಗುರುತರ ಬದಲಾವಣೆ ಕಾಣಿಸಿಕೊಂಡಿತ್ತು. ಈಕೆಗೆ 11 ವರ್ಷವಾದಾಗ ರಾಯದುರ್ಗ ತಾಲೂಕಿನ ಹರೇ ಸಮುದ್ರ ಗ್ರಾಮದ ಗೋಪಾಲಪ್ಪ ಎಂಬುವರ ವಂಶದ ಮುನಿಯಪ್ಪನವರ ಜೊತೆ ಮದುವೆಯಾಯಿತು. ವರನ ವಯಸ್ಸು 45 ವರ್ಷ. ಅವರಿಗೆ ಇದು ಮೂರನೆಯ ಮದುವೆ. ಮದುವೆಯಾದ 14 ವರ್ಷಕ್ಕೆ ಇವರಿಗೆ ಒಬ್ಬ ಮಗ ಹಾಗೂ ನಾಲ್ಕು ವರ್ಷಗಳ ನಂತರ ಮಗಳೂ ಜನಿಸಿದರು. ಇವರ 35ನೇ ವರ್ಷಕ್ಕೆ ಪತಿ ವಿಯೋಗವಾಯಿತು. ಇದರಿಂದ ಪ್ರಾಪಂಚಿಕ ಜೀವನದಲ್ಲಿ ಅತ್ಯಂತ ಜಿಗುಪ್ಸೆ ಹೊಂದಿ, ವಿಷಯಗಳಲ್ಲಿ ವೈರಾಗ್ಯ ಹುಟ್ಟಿತು. ಜೀವನದ ರೀತಿನೀತಿಗಳೇ ಬದಲಾಯಿತು.


ಇವರ ಮೊದಲ ಪದ 'ರಕ್ಷಿಸಬೇಕೆನ್ನ ಲಕ್ಷ್ಮೀನರಸಿಂಹನ ಭಕ್ತನೇ' ಎಂಬುದು. ತವರು ಮನೆಯ ಭೀಮವ್ವ, ಅತ್ತೆ ಮನೆಯ ಕೃಷ್ಣಬಾಯಿ ಈ ಎರಡನ್ನು ಸೇರಿಸಿ "ಭೀಮೇಶಕೃಷ್ಣ" ಅಂಕಿತದ ಅನೇಕ ಹಾಡುಗಳನ್ನು ರಚಿಸಿದರು. ಕೀರ್ತನೆ, ಸುಳಾದಿ, ಉಗಾಭೋಗ ಹೀಗೆ ಮೂರು ಪ್ರಕಾರಗಳಲ್ಲಿಯೂ ಭೀಮವ್ವನರು ಕೃತಿ ರಚನೆ ಮಾಡಿದ್ದು, 143 ಸಣ್ಣ ಕೀರ್ತನೆಗಳನ್ನೂ, 193 ದೊಡ್ಡ ಕೀರ್ತನೆಗಳನ್ನೂ ರಚಿಸಿದ್ದಾರೆ.



ನಿರಕ್ಷರರಾಗಿದ್ದ ಭೀಮವ್ವನವರಿಗೆ ಪುರಾಣ ಪ್ರವಚನ, ಹರಿಕಥೆಗಳ ಶ್ರವಣ ಮಾತ್ರದಿಂದಲೇ ಬಹಳಷ್ಟು ಕೃತಿಗಳ ರಚನೆ ಮಾಡಿರುವ ಅವರು ಮನೆಮನಗಳಲ್ಲಿ ಕೃತಿಗಳಿಂದ ಚಿರಸ್ಥಾಯಿಯಾಗಿ ನೆಲೆಸಿದ್ದಾರೆ. ಭೀಮವ್ವನವರ ಧೀರ್ಘ ಕೃತಿಗಳಾದ ಸುಭದ್ರಾ ಕಲ್ಯಾಣ, ರತಿ ಕಲ್ಯಾಣ, ನಳ ಚರಿತ್ರೆ, ಪತಿ ದಾನ ಕೊಟ್ಟ ಹಾಡು, ಇಂದಿಗೂ ಶ್ರಾವಣಮಾಸದಲ್ಲಿ ಹಾಡುವ ಶ್ರಾವಣ ಶುಕ್ರವಾರ ಮತ್ತು ಶನಿವಾರದ ಹಾಡು, ಶ್ರೀ ಶ್ರೀನಿವಾಸ ಕಲ್ಯಾಣ, ಸುಧಾಮನ ಹಾಡು, ಮುಯ್ಯದ ಹಾಡು, ಮುಂತಾದವು. ಅವರು ಬರೆದ "ಮುಯ್ಯದಹಾಡು" ಸುಪ್ರಸಿದ್ಧ ಕೀರ್ತನೆ, ಸುಳಾದಿ ಉಗಾಭೋಗಗಳೇ ಅಲ್ಲದೆ ಅನೇಕ ದೀರ್ಘಕೃತಿಗಳನ್ನು ಭೀಮವ್ವ ರಚಿಸಿದ್ದಾರೆ.

ಭಕ್ತಿಯೇ ಬದುಕಾಗಿದ್ದ ಭೀಮವ್ವ ಬದುಕನ್ನು ಭಗವಂತನಿಗಾಗಿ ಮೀಸಲಿಟ್ಟು ಸಂಭ್ರಮಿಸಿದ ಹೆಣ್ಣು. ತಾನಿದ್ದ ಪರಿಸರದಲ್ಲೆಲ್ಲಾ ಜ್ಞಾನಭಕ್ತಿಯ ಜ್ಯೋತಿಯನ್ನು ಬೆಳಗಿ, ಸಂಭ್ರಮವನ್ನು ಹಂಚಿದ ಪುಣ್ಯವಂತೆ. ಇವರು ಕ್ರಿ.ಶ. 1903ನೇ ಜನವರಿ ತಿಂಗಳ 11ರಂದು ಅಂದರೆ ಪುಷ್ಯ ಶುದ್ಧ 13, ಮುಕ್ಕೋಟಿ ದ್ವಾದಶಿಯ ದಿನ ಮಧ್ಯಾಹ್ನದಲ್ಲಿ ನಿಧನರಾದರು.

## ಪುಸ್ತಕ ಪರಿಚಯ




ಪುಸ್ತಕ : **ಕ್ಷತ್ರಿಯ ಕುಲಾವತಂಸ – ಹುಲಿಯ ಹೆಜ್ಜೆಯ ಗುರುತು**
ಲೇಖಕರು : **ಶೋಭಾ ರಾವ್**
ಪ್ರಕಾಶಕರು : **ಅವನಿ ಪ್ರಕಾಶನ**
ಪುಟಗಳು : **296+4**
ಬೆಲೆ : **210/–**

ಉತ್ತರ ಹಾಗೂ ದಕ್ಷಿಣದ ಎರಡೂ ಕಡೆ ಮುಸಲ್ಮಾನ ದೊರೆಗಳು ತಮ್ಮ ಸಾಮ್ರಾಜ್ಯ ವಿಸ್ತರಿಸಿದ್ದಲ್ಲದೆ ಅಷ್ಟೇ ಆಕ್ರಮಣಕಾರಿಯಾಗಿ ಮತಾಂತರ ಪ್ರಕ್ರಿಯೆ ಆರಂಭಿಸಿದ್ದ ಹೊತ್ತಿನಲ್ಲಿ ಜನಗಳಿಗೂ ನಿಧಾನವಾಗಿ ದಾಸ್ಯ ಭಾವ ರಕ್ತಗತವಾಗಿ ದೌರ್ಜನ್ಯ ಸಹಜ ಅನ್ನಿಸುವ ಹೊತ್ತಿಗೆ ಬಂದಿದ್ದು ಶಿವಾಜಿ. ಎರಡೂ ದಿಕ್ಕಿನಿಂದ ನುಗ್ಗಿ ಬರುತ್ತಿದ್ದ ಸುಲ್ತಾನರನ್ನು ಅಡ್ಡಗಟ್ಟಿ ತಡೆಯಾಗಿದ್ದ. ಸ್ವರಾಜ್ಯ ಸ್ಥಾಪಿಸಿ ಜನರಲ್ಲಿ ಕ್ಷಾತ್ರ ಭಾವ ಬಡಿದೆಬ್ಬಿಸಿದ್ದ.

ಕ್ಷತ್ರಿಯ ಕುಲಾವತಂಸ ಈ ಪುಸ್ತಕ ಶಿವಾಜಿಯ ಬದುಕಿನ ಹೆಜ್ಜೆಯ ಗುರುತು. ಶಿವಾಜಿ ಅಂದಿಗೂ ಇಂದಿಗೂ ಎಷ್ಟು ಪ್ರಸ್ತುತ ಎಂದು ತಿಳಿಸುವುದರ ಜೊತೆಗೆ ಅಂದು ಅವರು ಕಳೆದುಕೊಂಡಿದ್ದು ಏನು? ಇಂದು ನಾವು ಕಳೆದುಕೊಳ್ಳುತ್ತಿರುವುದು ಏನು ಎನ್ನುವುದು ಯೋಚನೆಗೆ ಹತ್ತಿಸಿ ನಮ್ಮೊಳಗಿನ ಆತ್ಮಾಭಿಮಾನ ಎಚ್ಚರಿಸುವ ಪುಸ್ತಕವೂ ಹೌದು. ಐತಿಹಾಸಿಕ ಘಟನೆಗಳ ದಾಖಲೆಗಳ ಸಮೇತ ನಿರೂಪಿತವಾದ ಕಾದಂಬರಿ.

## ಎಲ್ಲೋ ಕೇಳಿದ ಕಥೆ

ಹಿಂದೆ ಅಂಬರೀಷನೆಂಬ ರಾಜನಿದ್ದನು. ಅವನು ತನ್ನ ಪುಣ್ಯದ ಫಲದಿಂದ ಸ್ವರ್ಗಕ್ಕೆ ಹೋಗಿ ಅಲ್ಲಿ ಉದ್ಯಾನವನವೊಂದರಲ್ಲಿ ಉತ್ತಮವಾದ ರಥದಲ್ಲಿ ಕುಳಿತು ವಿಹರಿಸುತ್ತಿದ್ದನು. ಆದರೆ ಅಲ್ಲಿ ತನಗಿಂತಲೂ ಎತ್ತರದಲ್ಲಿ ವಿಮಾನವೊಂದರಲ್ಲಿ ಕುಳಿತು ಚಲಿಸುತ್ತಿದ್ದವನೊಬ್ಬನನ್ನು ಕಂಡು ಅಸೂಯೆಯಿಂದ ನೋಡಿದಾಗ ಅವನು ತನ್ನ ಸೇನಾಪತಿ ಸುದೇವನೆಂದು ತಿಳಿಯುತ್ತದೆ. ಅತ್ಯಂತ ಅಚ್ಚರಿಯೂ ಆಗುತ್ತದೆ. ತಾನು ರಾಜ ಎಷ್ಟೊಂದು ಯಜ್ಞ–ಯಾಗಾದಿಗಳು, ದಾನ–ಧರ್ಮಗಳು ಎಲ್ಲವನ್ನೂ ಮಾಡಿರುವೆ. ಇವನು ನನ್ನ ಕೈ ಕೆಳಗಿನವನು ಎಂದು ಭಾವಿಸಿ, ಕುತೂಹಲ ತಡೆಯಲಾರದೆ ಇಂದ್ರನ ಬಳಿಗೆ ಬಂದು ಕೇಳಿದನು. ಆಗ ದೇವೇಂದ್ರನು ಹೀಗೆ ಹೇಳಿದನು. ಒಮ್ಮೆ ರಾಕ್ಷಸರು ನಿನ್ನ ರಾಜ್ಯದ ಮೇಲೆ ಯುದ್ಧಕ್ಕೆ ಬಂದರು, ಆಗ ನೀನು ನಿನ್ನ ಸೇನಾಪತಿಯನ್ನು ಕರೆದು ರಾಕ್ಷಸರ ಮೇಲೆ ಯುದ್ಧ ಮಾಡುವಂತೆ ಆದೇಶಿಸಿದೆ. ಹಾಗು ಗೆದ್ದೇ ಬರಬೇಕು. ಖಂಡಿತವಾಗಿಯೂ ಸೋಲಿನೊಂದಿಗೆ ಹಿಂತಿರುಗಿ ಬರಬಾರದು ಎಂದು ಆಜ್ಞಾಪಿಸಿದೆ. ಆದರೆ ರಾಕ್ಷಸರ ಸೈನ್ಯ ಮುವ್ವತ್ತು ಕೋಟಿ ಇತ್ತು. ನಿನ್ನ ಸೈನ್ಯದಲ್ಲಿ ಕೇವಲ ಮೂರೂ ಸಾವಿರವಿತ್ತು. ಇನ್ನು ಜಯ ಹೇಗೆ ಬರುತ್ತದೆ? ಆದ್ದರಿಂದ ಇತ್ತ ರಾಜಾಜ್ಞೆಯನ್ನು ಮೀರುವಂತಿಲ್ಲ. ಅತ್ತ ಯುದ್ಧವೂ ಸಾಧ್ಯವಿಲ್ಲ. ಆದುದರಿಂದ ಸೇನಾಪತಿ ಸುದೇವನು ಮನೆಗೆ ಹೋಗಿ ಶಿವನ ಮುಂದೆ ಕುಳಿತು ನಿವೇದಿಸಿಕೊಳ್ಳುತ್ತಾ ತನ್ನ ಶಿರಸ್ಸನ್ನು ಕತ್ತರಿಸಿ ಶಿವನಿಗೆ ಸಮರ್ಪಿಸಿಕೊಳ್ಳಲು ಸಿದ್ಧನಾದನು. ಆದರೆ ಪರಶಿವನು ಪ್ರತ್ಯಕ್ಷನಾಗಿ 'ನೀನು ದೇಶಕ್ಕಾಗಿ ನಿನ್ನ ಪ್ರಾಣವನ್ನು ತ್ಯಜಿಸುತ್ತಿರುವೆ.' ನಿನ್ನ ತ್ಯಾಗಕ್ಕೆ ಮೆಚ್ಚಿದ್ದೇನೆ ಎನ್ನುತ್ತಾ ಒಂದು ದಿವ್ಯವಾದ ರಥವನ್ನೂ, ಒಂದು ಧನುಸ್ಸು,ಅನೇಕ ಬಾಣಗಳನ್ನು ಕೊಡುತ್ತ, ಕೇವಲ ರಾಕ್ಷಸರು ಮಾತ್ರವಲ್ಲದೆ ,ದೇವತೆಗಳು ಬಂದರೂ ಜಯವನ್ನು ಗಳಿಸುವೆ. ಆದರೆ ಯಾವುದೇ ಕಾರಣಕ್ಕೂ ರಥದಿಂದ ಇಳಿಯಬಾರದು ಎಂದು ಹೇಳಿದನು. ಮೊದಲಿಗೆ ಸಮ,ಧಮ ಮತ್ತು ವಿಧಮರೆಂಬ ರಾಕ್ಷಸರು ಯುದ್ಧಕ್ಕೆ ಬಂದರು. ಸಮ ಹಾಗೂ ದಮರನ್ನು ಸೋಲಿಸಿದನು. ವಿಧಮನು ವೇಗವಾಗಿ ಇವನ ಕಡೆ ಬರಲು ಶಿವನ ಮಾತನ್ನು ಮರೆತನು ರಥದಿಂದ ಕೆಳಗೆ ಇಳಿದನು. ಕೂಡಲೇ ವಿಧಮನು ಸುದೇವನನ್ನು ಕೊಂದನು. ಸುದೇವನೂ ವಿಧಮನನ್ನು ಸಂಹರಿಸಿದನು. ಹೀಗೆ ಧರ್ಮಕ್ಕಾಗಿ ಸುದೇವನು ಹೋರಾಡಿದನು ಆದ್ದರಿಂದಲೇ ಇಂದು ಅವನು ಇಲ್ಲಿ ಸ್ವರ್ಗದಲ್ಲಿ ನಿನಗಿಂತಲೂ ಉತ್ತಮ ಸ್ಥಿತಿಯಲ್ಲಿರುವನು ಎಂದು ಇಂದ್ರನು ಅಂಬರೀಷನಿಗೆ ಹೇಳಿದನು.

# ಚಂಬೆಳಕಿನ ಕವಿ ಚೆನ್ನವೀರ ಕಣವಿ



ಹಿರಿದು ಮನಸ್ಸು
ಹಿರಿದಾದ ಭಾವ
ಮುಗಿಲಗಲವಾಗಬೇಕು

ಇದು ನಮ್ಮನ್ನಗಲಿದ ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ಮತ್ತು ಪ್ರಮುಖ ಕವಿಗಳಾದ ನಾಡೋಜ ಚನ್ನವೀರ ಕಣವಿ ಅವರ ಆಶಯ.ವ್ಯಕ್ತಿಯ ಮನಸ್ಸು ವಿಶಾಲವಾಗಿ ಯೋಚಿಸುವಂತಾಗ ಬೇಕೆಂಬ ನಿಲುವು ಅವರ ಕಾವ್ಯದ ಮೂಲಕ ಹೊರಹೊಮ್ಮಿದೆ; ಅದು ಮುಗಿಲಗಲವಾಗಬೇಕೆನ್ನುತ್ತಾರೆ. ಸಮಾಜ ಆರೋಗ್ಯ ಪೂರ್ಣ ಸಂಬಂಧಗಳಿಂದ ವಿಕಾಸಗೊಳ್ಳಬೇಕೆಂಬುದನ್ನು ಅವರು ಕಾವ್ಯಮಯವಾಗಿ ಹೃದಯ ಮುಟ್ಟುವಂತೆ ಹೇಳುವುದು.

ನವೋದಯ ಆನಂತರದ ನವ್ಯ, ಬಂಡಾಯ ಈ ರೀತಿ ಕಾವ್ಯ ಮಾರ್ಗಗಳು ನಿರ್ಮಾಣವಾದಾಗ ಅವುಗಳಲ್ಲಿ ಹೆಜ್ಜೆಯೂರಿದರೂ, ಅದು ಅವರ ನಿರ್ಧಿಷ್ಠ ಹೆಜ್ಜೆ ಗುರುತಾಗದೆ ತಮ್ಮದೇ ಆದ ಒಂದು ಅನನ್ಯತೆಯನ್ನು, ಕಾವ್ಯ ವಿಶೇಷವನ್ನು ಪ್ರಕಟಪಡಿಸಿಕೊಂಡು ಮುನ್ನಡೆದರು. ಕಣವಿ ಅವರ ಮೇಲೆ ಪೂರ್ವಸೂರಿಗಳ ಪ್ರಭಾವವಿಲ್ಲವೇ ಇಲ್ಲ ಎನ್ನಲಾಗದು, ಬೇಂದ್ರೆ, ಮಧುರ ಚೆನ್ನ, ಕುವೆಂಪು ಹೀಗೆ ಅಂದಿನ ಕಾವ್ಯ ದಿಗ್ಗಜಗಳ ಸ್ಫುರಣೆ, ಪ್ರಭಾವ ಅವರ ಕಾವ್ಯದಲ್ಲಿದ್ದರೂ ಅವರ ಕಾವ್ಯ ಆ ಪ್ರಭಾವಗಳಿಂದ ಹೊರ ಬಂದು ಭಿನ್ನ ನೆಲೆಯಲ್ಲಿ ಸಾಗಿತೆಂಬುದು ಅಷ್ಟೇ ಸ್ಪಷ್ಟ.

ಗೋಪಾಲಕೃಷ್ಣ ಅಡಿಗರಂತಹವರು ನವ್ಯಕಾವ್ಯ ಮಾರ್ಗಕ್ಕೊಂದು ಸ್ಪಷ್ಟ ದಾರಿ ನಿರ್ಮಿಸಿದ್ದರು. ಅವರನ್ನು ಅನುಸರಿಸಿದ ಆ ಮಾರ್ಗದ ಬಹುಮುಖ್ಯ ಕವಿಗಳ ಮಧ್ಯದಲ್ಲೂ, ನವ್ಯದ ಗಾಳಿಗೆ ಅಲುಗಾಡದೆ, ಆದರೆ ಆ ಮಾರ್ಗವನ್ನು ತಿರಸ್ಕರಿಸದೆ ಆ ಎಲ್ಲಾ ಪ್ರಭಾವಗಳಿಗೆ ಸಿಕ್ಕು ಹೊಯ್ದಾಟಕ್ಕೆ ಎಡೆಯಾಗದೆ ಎಲ್ಲಾ ಕಾವ್ಯಮಾರ್ಗಗಳ ಉತ್ತಮಾಂಶಗಳನ್ನು ಆಯ್ದುಕೊಂಡು ತಮ್ಮ ಸ್ವಂತಿಕೆಗೆ ಅವು ಚ್ಯುತಿತಾರದಂತೆ ಎಚ್ಚರ ವಹಿಸಿದ ಕವಿ ಅವರು.

ಅವರ ಮೊದಲ ಕವನ ಸಂಕಲನ ಕಾವ್ಯಾಕ್ಷಿಯಿಂದ ಹಿಡಿದು ಈವರೆಗಿನ ಕಾವ್ಯ ಸಂಕಲನಗಳಲ್ಲಿ ಪ್ರಕೃತಿ, ಸಾಮಾಜಿಕ ದೋಷ, ನಿಸರ್ಗದೊಂದಿಗಿನ ಮುಖಾಮುಖಿ, ಅನುಭಾವಿಕ ದೃಷ್ಟಿಕೋನ, ಬದುಕಿನ ಮೌಲ್ಯಗಳತ್ತ ದೃಷ್ಟಿ, ಮಾನವೀಯ ತಹತಹ ಈ ರೀತಿ ಅವರ ಕಾವ್ಯಗಂಗೆ ಮೃದುವಾಗಿ, ಶಾಂತವಾಗಿ, ಆಗಾಗ ರಭಸದಿಂದ ಕೆಲವೊಮ್ಮೆ ಸಣ್ಣ ಜಲಪಾತದ ಸದ್ದಿನಿಂದಲೂ ಕೂಡಿ ಕನ್ನಡ ಸಾಹಿತ್ಯ ಸಾಗರ ಸೇರಿ ಸಹೃದಯರ ಮನಸ್ಸನ್ನು

3ನೇ ಪುಟಕ್ಕೆ...

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್

2ನೇ ಪುಟದಿಂದ...

ಸೆಳೆದು ಅದರಲ್ಲಿ ಸೇರಿಹೋಗಿದೆ. ನವೋದಯ ಕವಿಯೆಂದೇ ಹಣೆಪಟ್ಟಿ ಹಚ್ಚಿಕೊಳ್ಳದಿದ್ದರೂ ನವೋದಯ ಕಾಲದ ಪ್ರಕೃತಿ ವರ್ಣನೆ, ಪ್ರೀತಿ, ಪ್ರೇಮದ ಸೆಲೆ ಅವರ ಕಾವ್ಯದಲ್ಲಿ ಹೊರಹೊಮ್ಮಿದೆ.

ಹೊಸ ಜಗವು ರೂಪುಗೊಂಡಿಹುದೀಗ; ಹೊಸಬಾಳು
ನಮ್ಮದಿದೆ, ಹೊಸತೆಲ್ಲ ನಮ್ಮದಿನ್ನು
ಹಳೆಯ ಕಾಲದ ರೂಢಿ-ಜಡಮತಿಯರನೆಲ್ಲ
ಬಿಟ್ಟುಬಿಡಿ ಅವರವರ ಪಾಡಿಗಿನ್ನು

ಎಂದು ಯುವ ಜನಾಂಗಕ್ಕೆ-ನೀಡುವ ಕರೆ ನವ ಸಮಾಜದ ಕನಸು ಕವನವಾಗಿದ್ದರೂ, 'ಕೊನೆಯ ಎಚ್ಚರಿಕೆ' ಕವನದಲ್ಲಿ ಸಮಾಜ ಬದಲಾಗದ ಒಂದು ವಿಷಾದ ಅವರನ್ನು ಕಾಡಿದಂತಿದೆ.

ಕಾಗೆ ಬೇವಿನಕಾಯಿ ಕುಕ್ಕಿ ಚುಂಚನು ತಿಕ್ಕಿ
ಹೊತ್ತು ಗೊತ್ತಿಲ್ಲದೆ ಕಿರುಚುತ್ತಿದ್ದರೆ,

ಗಿಡದ ಬೊಡ್ಡೆಯನಾತು ಮಲಗಿರುವ ಭಿಕ್ಷುಕನ ಮುತ್ತಿ ಜೊಮ್ಮೆಂದಿಹುದು. ನೊಣದ ಪರಿಸೆ; ಬಾಡಿಗೆಯ ಚಕ್ಕಡಿಗೆ ಎಣ್ಣೆಯಿಲ್ಲದ ಕೀಲು ಈ ರೀತಿ ಕವನ ಒಂದು ಭೀಕರ ಚಿತ್ರಣವನ್ನು ನೀಡುತ್ತಾ ಬಂದರೆ, ಅಪರಾವತಾರದಂತಹ ಕವನದಲ್ಲಿ ರಾಜಕಾರಣದ ಕುಲಗೆಟ್ಟ ಸ್ಥಿತಿಯ ಚಿತ್ರಣವಿದೆ. ವಕ್ರರೇಖೆ, ನಾಳಿನ ನವೋದಯ ಈ ಕವನಗಳಲ್ಲಿ ಪ್ರಸ್ತುತ ಸ್ಥಿತಿಯ ಅನಾವರಣವಿದೆ ಹಾಗೆಯೇ ಒಂದು ಆಶಯವೂ ಇದೆ.

ಹಿರಿಯ ಕವಿಗಳ ಹಾದಿಯಲ್ಲೆ ಸಾಗಿದರೂ, ತಮ್ಮದೇ ದಾರಿ ನಿರ್ಮಿಸಿಕೊಂಡ, ಯಾವ ಸಿದ್ಧಾಂತಕ್ಕೂ ಜೋತುಬೀಳದೆ ತಮ್ಮದೆ ಲಯ, ಬದುಕಿನಲ್ಲಿ ಮುಖಾಮುಖಿಯಾದುದಕ್ಕೆ ಕಾವ್ಯದ ಸ್ಪರ್ಶ ನೀಡಿದ ಚಂಬೆಳಕಿನ ಕವಿ ಚನ್ನವೀರ ಕಣವಿ. ಎಂದೂ ಒಂದು ಸಿದ್ಧಾಂತಕ್ಕೆ ಅಂಟಿ ಕೂರಲಿಲ್ಲ. ಸಾಹಿತ್ಯ ಸಮಾಜ ಪರಿವರ್ತನೆಯ ಅಸ್ತ್ರವೆಂದೂ ಭಾವಿಸದೆ ಬದುಕಿನ ಏರಿಳಿತಗಳಲ್ಲಿ ಸಾಗುವಾಗ ಅವರ ದೃಷ್ಟಿಗೆ ಎಡೆ ತಾಕಿದ್ದನ್ನು ಕಾವ್ಯದಲ್ಲಿ ಹಿಡಿದಿಟ್ಟು ಅರ್ಥಪೂರ್ಣವಾಗಿ ನೀಡಿದರು.

ಕಣವಿ ಅವರ ಹುಟ್ಟೂರು ಧಾರವಾಡ ಜಿಲ್ಲೆಯ ಹೊಂಬಳ. ಜನನ ಜೂನ್-1928. ಪಾರ್ವತವ್ವ ಮತ್ತು ಸಕರೆಪ್ಪ ಅವರ ತಾಯಿತಂದೆ. ಬಡತನದ ಬಾಲ್ಯವಾದರೂ ಧಾರವಾಡ ನಗರದಲ್ಲಿ ಶಿಕ್ಷಣ ಮುಂದುವರೆದು ಸ್ನಾತಕೋತ್ತರ ಪದವಿಯನ್ನೂ ಕರ್ನಾಟಕ ವಿವಿಯಲ್ಲಿ ಪಡೆದು ವೃತ್ತಿ ಜೀವನಕ್ಕೆ ಕಾಲಿಟ್ಟರು. ಪತ್ನಿ ಶಾಂತಾದೇವಿ. ಅವರೂ ಸಹ ಕವಿ. ಸಾಹಿತ್ಯ ಸಂಸ್ಕೃತಿಯಲ್ಲಿ ಒಲವು ಹೊಂದಿದ ಜೀವ. ದಂಪತಿಗಳಿಬ್ಬರೂ ಸಹ ಸೌಜನ್ಯ ವಿನಯವನ್ನು ಮೈಗೂಡಿಸಿಕೊಂಡವರು. ಕಣವಿ ಅವರ ಸಾಹಿತ್ಯ ಸಾಧನೆಯನ್ನು ಅವರ ಸಾಹಿತ್ಯ ಮಿತ್ರರ ಸಹೃದಯರು-ಚಂಬೆಳಕು ಎಂಬ ಅಭಿನಂದನಾ ಗ್ರಂಥದಲ್ಲಿರಿಸಿ ಅವರಿಗೆ ಅರ್ಪಿಸಿದ್ದಾರೆ.

ಡಾ. ಚೆನ್ನವೀರ ಕಣವಿ ಭೌತಿಕವಾಗಿ ಇಂದು ನಮ್ಮೊಂದಿಗಿಲ್ಲ. ಆದರೆ ಅವರ ಕವನಗಳ ಮೂಲಕ ನಮ್ಮ ಹೃನ್ಮನದಲ್ಲಿ ಚಿರಸ್ಥಾಯಿಯಾಗಿದ್ದಾರೆ.


– ಸ. ಗಿರಿಜಾಶಂಕರ



ದಾವಣಗೆರೆ ಜಿಲ್ಲೆಯ ಹರಿಹರದ ತುಂಗಭದ್ರಾ ನದಿಯ ತಟದಲ್ಲಿ "ಉತ್ತರದಲ್ಲಿ ಗಂಗಾ ಆರತಿ ಮಾದರಿಯಲ್ಲಿ ದಕ್ಷಿಣದಲ್ಲಿ ತುಂಗಾ ಆರತಿ" ಪ್ರಯುಕ್ತ 108 ಯೋಗ ಮಂಟಪಗಳ ನಿರ್ಮಾಣ ಕಾರ್ಯಕ್ಕೆ ಶಿಲಾನ್ಯಾಸ ನೆರವೇರಿಸಿದರು. ಈ ಸಂದರ್ಭದಲ್ಲಿ ಹರಿಹರದ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮಿಗಳು, ಸಚಿವರಾದ ಬೈರತಿ ಬಸವರಾಜ್, ಮುರುಗೇಶ್ ನಿರಾಣಿ, ಸಂಸದರಾದ ಜಿ.ಎಂ. ಸಿದ್ದೇಶ್ವರ ಮತ್ತು ಪ್ರಮುಖರು ಉಪಸ್ಥಿತರಿದ್ದರು.

ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಕ್ಕೆ ಏಪ್ರಿಲ್ ತಿಂಗಳಿನಿಂದ ಹೆಚ್ಚುವರಿಯಾಗಿ ಒಂದು ಕೆಜಿ ಅಕ್ಕಿಯನ್ನು ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಈ ಘೋಷಣೆ ಮಾಡಿದ್ದಾರೆ.

# ಸಾಲುದ್ದದ ಸುದ್ದಿಗಳು



ಪ್ರಸ್ತುತ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಒಬ್ಬರಿಗೆ 5 ಕೆಜಿಯಂತೆ ಆಹಾರಧಾನ್ಯವನ್ನು ಪ್ರತಿ ತಿಂಗಳು ಹಂಚಲಾಗುತ್ತಿದೆ. ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಒಂದು ಕೆಜಿ ಅಕ್ಕಿ ಉಚಿತವಾಗಿ ನೀಡಲು ಆದೇಶಿಸಿದ್ದು, ಏಪ್ರಿಲ್ ತಿಂಗಳಿನಿಂದ ಇದು ಜಾರಿಗೆ ಬರಲಿದೆ ಎಂದಿದ್ದಾರೆ. ಸರ್ಕಾರದ ಈ ನಿರ್ಧಾರದಿಂದಾಗಿ 1.14 ಕೋಟಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಪ್ರಯೋಜನ ಸಿಗಲಿದೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2021-22ನೇ ಸಾಲಿನ ಮೂರು ಮತ್ತು ನಾಲ್ಕನೇ ಕಂತಿನ ಅನುದಾನ 731.03 ಕೋಟಿ ರೂಪಾಯಿ ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

## ಕಲ್ಯಾಣ ಕರ್ನಾಟಕ

ಈ ಸಂಬಂಧ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಣ ಬಿಡುಗಡೆಗೆ ಆದೇಶ ಹೊರಡಿಸಿದೆ. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಎಲ್ಲ ರೀತಿಯ ನೆರವು ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಭರವಸೆ ನೀಡಿದ್ದರು. ಆ ಪ್ರಕಾರ ಪ್ರಸಕ್ತ ಹಣಕಾಸು ವರ್ಷದ ಮೂರನೇ ಹಾಗೂ ನಾಲ್ಕನೇ ಕಂತಿನ ಅನುದಾನ ನೀಡಿ ಸರ್ಕಾರ ಆದೇಶಿಸಿದೆ.

ಕಿಸಾನ್ ಡ್ರೋನ್‌ಗಳು ಕೃಷಿ ಕ್ಷೇತ್ರದಲ್ಲಿ ಹೊಸ ಕ್ರಾಂತಿಯ ಮೊದಲ ಹೆಜ್ಜೆಯಾಗಿದೆ. ಹೊಸ ಉದ್ಯೋಗ ಸೃಷ್ಟಿಸುವ ಜೊತೆಗೆ ವಿದ್ಯಾವಂತ ಯುವ ಕೃಷಿಕರಿಗೆ ಹೊಸ ಅವಕಾಶಗಳನ್ನು ನಿರ್ಮಿಸುತ್ತದೆ. ಇದರಿಂದಾಗಿ ರೈತರಿಗೆ ಸಾಕಷ್ಟು ಸಮಯ ಉಳಿತಾಯವಾಗಲಿದೆ. ಕಾರ್ಮಿಕರ ಸಮಸ್ಯೆ ಎದುರಿಸುತ್ತಿರುವ ಕೃಷಿ ಕ್ಷೇತ್ರಕ್ಕೆ ಇದು ವರದಾನವಾಗಲಿದೆ ಎಂದು ರಾಜ್ಯಸಭಾ ಸಂಸದ ಹಾಗೂ ರಾಜ್ಯ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಈರಣ್ಣ ಕಡಾಡಿ ಅವರು ಕೇಂದ್ರ ಸರ್ಕಾರದ ಕ್ರಮವನ್ನು ಸ್ವಾಗತಿಸಿದ್ದಾರೆ.

ಫೆಬ್ರುವರಿ 1 ರಂದು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಘೋಷಣೆಯಾಗಿದ್ದ, ಕಿಸಾನ್ ಡ್ರೋನ್ ಯೋಜನೆಯನ್ನು ಕೇವಲ 18 ದಿನಗಳಲ್ಲಿ ಜಾರಿಗೆ ಬರುವಂತೆ ಮಾಡಿದ ದೇಶದ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾಜ್ಯದ ರೈತರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಈರಣ್ಣ ಕಡಾಡಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೃಷಿ ಮಾರುಕಟ್ಟೆಗಳಿಗೆ ಕೃಷಿ ಉತ್ಪನ್ನಗಳನ್ನು ಸಾಗಿಸಲು ತುಂಬಾ ಸಹಕಾರಿಯಾಗಲಿದೆ. ಕೀಟನಾಶಕ, ಔಷಧ, ಪೋಷಕಾಂಶಗಳ



ಸಿಂಪಡಣೆ, ಬೆಳೆ ಆರೋಗ್ಯ ತಪಾಸಣೆ, ಭೂ ದಾಖಲೆಗಳ ಡಿಜಿಟಲೀಕರಣ, ಜಮೀನುಗಳ ಸರ್ವೆ ಈ ಎಲ್ಲ ಕಾರ್ಯಗಳಿಗೆ ಕಿಸಾನ್ ಡ್ರೋನ್ ಯೋಜನೆ ಅನುಕೂಲವಾಗಲಿದೆ.

ರೈತ ಉತ್ಪಾದಕ ಸಂಸ್ಥೆಗಳಿಗೆ ಖರೀದಿಸಲು ಸರ್ಕಾರ ಶೇ. 75 ರಷ್ಟು ಸಬ್ಸಿಡಿ ನೀಡುತ್ತದೆ. ಹೆಕ್ಟೇರ್‌ಗೆ 6.000 ರೂ. ನಂತೆ ಪಾವತಿಸಿ ಬಾಡಿಗೆಗೂ ಪಡೆಯಬಹುದು. ಸದ್ಯ 100 ಸ್ಥಳಗಳಲ್ಲಿ ಕಿಸಾನ್ ಡ್ರೋನ್ ಯೋಜನೆ ಅನುಷ್ಠಾನಕ್ಕೆ ಚಾಲನೆ ನೀಡಲಾಗಿದ್ದು, 2 ವರ್ಷಗಳಲ್ಲಿ ಈ ಸಂಖ್ಯೆ 1 ಲಕ್ಷಕ್ಕೇರಲಿದೆ. ಕೃಷಿ ಕ್ಷೇತ್ರದ ವಿಚಾರದಲ್ಲಿ ಇದೊಂದು ಉತ್ತೇಜನಕಾರಿ ಮತ್ತು ಮಹತ್ವದ ಬೆಳವಣಿಗೆ ಎಂದು ಅವರು ಮೆಚ್ಚುಗೆ ಸೂಚಿಸಿದ್ದಾರೆ.

ಶಿವಮೊಗ್ಗದಲ್ಲಿ ನಡೆದ ಭಜರಂಗದಳ ಕಾರ್ಯಕರ್ತ ಹರ್ಷ ಅವರ ಹತ್ಯೆ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ ಆಗ್ರಹಿಸಿದೆ. "ಶಿವಮೊಗ್ಗದ ಕೋಟೆ ಪ್ರಖಂಡ ಬಜರಂಗದಳದ ಸಹ ಸಂಯೋಜಕ ಹರ್ಷ ಅವರನ್ನು ಮತಾಂಧ, ದೇಶದ್ರೋಹಿ ಎಸ್ಡಿಪಿಐ ಮತ್ತು ಪಿಎಫ್‌ಐ ದುಷ್ಕರ್ಮಿಗಳು ನಿನ್ನೆ ರಾತ್ರಿ ಹತ್ಯೆ ಮಾಡಿರುವುದು ಅತ್ಯಂತ ಖಂಡನೀಯ ಸಂಗತಿ. ಕಳೆದ ಹಲವಾರು ವರ್ಷಗಳಿಂದ ವ್ಯವಸ್ಥಿತವಾಗಿ ಹಿಂದೂಗಳ ಮಾರಣ ಹೋಮ ಮಾಡುತ್ತಿದ್ದಾರೆ" ಎಂದು ವಿಶ್ವ ಹಿಂದೂ ಪರಿಷತ್ ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವರಾಜ್ ಆರೋಪಿಸಿದ್ದಾರೆ.

ಕೊಲೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ ಒಪ್ಪಿಸಬೇಕು ಎಂದು ಆಗ್ರಹಿಸಿದ್ದಾರೆ. ಹರ್ಷ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಶಿವಮೊಗ್ಗ ಎಡಿಜಿಪಿ ಎಸ್. ಮುರುಗನ್ ತಿಳಿಸಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಅವರು ನಿನ್ನೆ ಪ್ಯಾರಿಸ್‌ನಲ್ಲಿ ಫ್ರೆಂಚ್ ವಿದೇಶಾಂಗ ಸಚಿವ ಜೀನ್-ಯ್ವೆಸ್ ಲೆ-ಡ್ರಿಯನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಉಭಯ ನಾಯಕರು ಪ್ರಮುಖ ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳನ್ನು ಚರ್ಚಿಸಿದರು. ದ್ವಿಪಕ್ಷೀಯ ಮಾತುಕತೆಯಲ್ಲಿ "ನೀಲಿ ಆರ್ಥಿಕತೆ ಮತ್ತು ಸಾಗರ ಆಡಳಿತದಲ್ಲಿ ಭಾರತ-ಫ್ರಾನ್ಸ್ ಮಾರ್ಗಸೂಚಿಯನ್ನು", ಅಳವಡಿಸಿಕೊಳ್ಳಲು ಒಪ್ಪಿಕೊಳ್ಳಲಾಗಿದೆ.



ಸಾಂಸ್ಕೃತಿಕ, ಆರ್ಥಿಕ, ಮೂಲಸೌಕರ್ಯ ಮತ್ತು ವೈಜ್ಞಾನಿಕ ಸಹಕಾರದ ಮೂಲಕ ನೀಲಿ ಆರ್ಥಿಕತೆಯ ಕ್ಷೇತ್ರದಲ್ಲಿ ಪಾಲುದಾರಿಕೆಯನ್ನು ಹೆಚ್ಚಿಸುವ ಗುರಿಯನ್ನು ಮಾರ್ಗಸೂಚಿಯು ಹೊಂದಿದೆ. ಜನರಿಂದ ಜನರ ಸಂಪರ್ಕವನ್ನು ಮತ್ತಷ್ಟು ಸುಗಮಗೊಳಿಸುವ ಗುರಿಯೊಂದಿಗೆ, ಇಬ್ಬರು ಸಚಿವರು ತಮ್ಮ ಸಹಕಾರವನ್ನು ಮುಂದುವರೆಸಲು ಮತ್ತು ಹೆಚ್ಚಿಸಲು ಒಪ್ಪಿಕೊಂಡಿದ್ದಾರೆ. ಕ್ರೀಡಾ ಕ್ಷೇತ್ರದಲ್ಲಿ ಜಂಟಿ ಉದ್ದೇಶದ ಘೋಷಣೆಯನ್ನು ಶೀಘ್ರದಲ್ಲೇ ಅಂತಿಮಗೊಳಿಸಲು, ಸಾರ್ವಜನಿಕರಿಗೆ ದೀರ್ಘಕಾಲದ ಸಹಕಾರವನ್ನು ಬಲಪಡಿಸಲು, ಭಾರತ ಮತ್ತು ಫ್ರಾನ್ಸ್‌ನಲ್ಲಿ ಸಂಬಂಧಿತ ಅಧಿಕಾರಿಗಳ ನಡುವಿನ ಆಡಳಿತ ಮತ್ತು ಆಡಳಿತ ಸುಧಾರಣೆಗಳಿಗೆ ಉಭಯ ನಾಯಕರು ಒಪ್ಪಿಕೊಂಡಿದ್ದಾರೆ.

Date of Publication 25th FEBRUARY 2022
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-03-2022

पुंगव PUNGAVA
# 74, Ranga Rao Road, Shankarapuram, Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಪ್ರಬೋಧಿನೀ ಗುರುಕುಲದ ಪ್ರವೇಶಕ್ಕಾಗಿ ಅರ್ಜಿ



ಪ್ರಬೋಧಿನೀ ಗುರುಕುಲದಲ್ಲಿ 2022–2023ನೇ ಶೈಕ್ಷಣಿಕ ವರ್ಷದಲ್ಲಿಅಧ್ಯಯನ ಮಾಡಬಯಸುವ ಗಂಡುಮಕ್ಕಳಿಗೆ ಅರ್ಜಿಗಳು ದೊರೆಯುತ್ತಿದ್ದು, ಆಸಕ್ತರು ಪ್ರಬೋಧಿನೀ ಗುರುಕುಲದ ವಿಳಾಸಕ್ಕೆ 300/–ರೂಗಳ ಮನಿ ಆರ್ಡರ್ ಕಳುಹಿಸುವ ಮೂಲಕ ಅರ್ಜಿಯನ್ನು ಪಡೆಯಬೇಕಾಗಿ ಈ ಮೂಲಕ ತಿಳಿಸಲಾಗಿದೆ.

**ಗುರುಕುಲ ಶಿಕ್ಷಣ ಯಾರಿಗೆ ಮತ್ತು ಹೇಗೆ?**

- ಪ್ರಸ್ತುತ 5 ನೇತರಗತಿಪರೀಕ್ಷೆಬರೆಯಲಿರುವ 11 ವರ್ಷ ತುಂಬಿದ ಗಂಡು ಮಕ್ಕಳಿಗೆ ಪ್ರವೇಶ.
- ಗುರುಕುಲದ ಒಟ್ಟು ಕಲಿಕೆಯ ಅವಧಿ 12 ವರ್ಷಗಳು.
- ತಂದೆ, ತಾಯಿ ಹಾಗೂ ವಿದ್ಯಾರ್ಥಿಯ ಸಂದರ್ಶನ ಮಾಡಲಾಗುತ್ತದೆ.
- ವೇದ, ವಿಜ್ಞಾನ, ಯೋಗ, ಕೃಷಿ ಮತ್ತು ಕಲಾ ಎಂಬ ಪಂಚಮುಖೀ ಶಿಕ್ಷಣ ವ್ಯವಸ್ಥೆ.
- ಆರ್ಷ ಪರಂಪರೆಯ ಅಧ್ಯಾತ್ಮ ಆಧಾರಿತ ಶಿಕ್ಷಣದೊಂದಿಗೆ, ಗಣಿತ, ವಿಜ್ಞಾನ, ಇತಿಹಾಸದ ಶಿಕ್ಷಣ.
- ಸಂಸ್ಕೃತದಲ್ಲಿ ದೈನಂದಿನ ವ್ಯವಹಾರ ಮತ್ತು ಶಾಸ್ತ್ರೀಯ ಅಧ್ಯಯನಕ್ಕೆ ಒತ್ತು.
- ಕನ್ನಡದೊಂದಿಗೆ ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳ ಕಲಿಕೆಗೆ ಸೂಕ್ತ ಅವಕಾಶ.
- ಶಿಕ್ಷಣದೊಂದಿಗೆ, ಆಹಾರ ಮತ್ತು ವಸತಿ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತದೆ.

ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ
**ಕೊನೆಯ ದಿನಾಂಕ 31/03/2022**

ಮನಿ ಆರ್ಡರ್ ಕಳುಹಿಸಬೇಕಾದ ವಿಳಾಸ:

**ವ್ಯವಸ್ಥಾಪಕರು,**
ಪ್ರಬೋಧಿನೀ ಗುರುಕುಲ.
ಚಿತ್ರಕೂಟ, ಅದ್ದಡಗ್ರಾಮ, ಹರಿಹರಪುರ ಅಂಚೆ. ಕೊಪ್ಪತಾಲ್ಲೂಕು.
ಚಿಕ್ಕಮಗಳೂರು ಜಿಲ್ಲೆ– ಚ577120
ಸಂಪರ್ಕಕ್ಕೆ: 9845071185 (ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ
Email: prabodhinigurukula@gmail.com
www.prabodhinigurukula.org

## ಈ ವರ್ಷ $40 ಬಿಲಿಯನ್ ರಫ್ತು ಗುರಿ ಸಾಧಿಸಲಿದೆ ಭಾರತದ ರತ್ನ, ಆಭರಣ ವಲಯ

ಈ ವರ್ಷ ರತ್ನಗಳು ಮತ್ತು ಆಭರಣ ವಲಯವು 40 ಬಿಲಿಯನ್ ಡಾಲರ್ ರಫ್ತು ಗುರಿಯನ್ನು ಸಾಧಿಸುವ ನಿರೀಕ್ಷೆಯಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ.

ಈ ವಲಯವು ಕೋವಿಡ್ ಪೂರ್ವದ ಮಟ್ಟಕ್ಕಿಂತ 6.5 ಪ್ರತಿಶತದಷ್ಟು ಬೆಳವಣಿಗೆಯನ್ನು ದಾಖಲಿಸುವ ನಿರೀಕ್ಷೆಯಿದೆ. ಜೆಮ್ಸ್ ಮತ್ತು ಜ್ಯುವೆಲ್ಲರಿ ವಲಯವು ಭಾರತದ ಆರ್ಥಿಕತೆಯ ಬಲವಾದ ಆಧಾರಸ್ತಂಭವಾಗಿದೆ ಎಂದ ಅವರು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತವು ತನ್ನ ರತ್ನ ಮತ್ತು ಆಭರಣ ಕ್ಷೇತ್ರವನ್ನು ಸ್ವಾವಲಂಬಿಯನ್ನಾಗಿ ಮಾಡಲು ಬಯಸುತ್ತದೆ ಜಾಗತಿಕ ರತ್ನಗಳು ಮತ್ತು ಆಭರಣ ವ್ಯಾಪಾರದಲ್ಲಿ ಭಾರತದ ಹೆಜ್ಜೆಗುರುತನ್ನು ಬೆಳೆಯಲು ಮತ್ತು ವಿಸ್ತರಿಸಲು 2022 ರ ಬಜೆಟ್ ಈ ವಲಯಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ.

## INS ವಿಶಾಖಪಟ್ಟಣಂನಿಂದ ಬ್ರಹ್ಮೋಸ್ ಕ್ಷಿಪಣಿ ಪರೀಕ್ಷೆ ಯಶಸ್ವಿ



ಪಶ್ಚಿಮ ಸಮುದ್ರ ತೀರದಲ್ಲಿ ಭಾರತೀಯ ನೌಕಾಪಡೆಯ ಯುದ್ಧನೌಕೆ ಐಎನ್‌ಎಸ್ ವಿಶಾಖಪಟ್ಟಣಂನಲ್ಲಿ ಬ್ರಹ್ಮೋಸ್ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆಯನ್ನು ಇಂದು ಯಶಸ್ವಿಯಾಗಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ ಸೇರ್ಪಡೆಗೊಂಡ ಭಾರತೀಯ ನೌಕಾಪಡೆಯ ಇತ್ತೀಚಿನ ಯುದ್ಧನೌಕೆಯಾದ ಐಎನ್‌ಎಸ್ ವಿಶಾಖಪಟ್ಟಣದಿಂದ ಕ್ಷಿಪಣಿಯನ್ನು ಪರೀಕ್ಷಿಸಲಾಗಿದೆ. ಫೆಬ್ರವರಿ 21 ರಂದು ರಾಷ್ಟ್ರಪತಿಗಳ ಫ್ಲೀಟ್ ರಿವ್ಯೂನಲ್ಲಿ ಭಾಗವಹಿಸಲು ಯುದ್ಧನೌಕೆ ವಿಶಾಖಪಟ್ಟಣಂಗೆ ಬಂದಿದೆ.

ಬ್ರಹ್ಮೋಸ್ ಭಾರತೀಯ ನೌಕಾಪಡೆಯ ಯುದ್ಧನೌಕೆಗಳ ಮುಖ್ಯ ಆಯುಧ ವ್ಯವಸ್ಥೆಯಾಗಿದೆ ಮತ್ತು ಅದನ್ನು ಬಹುತೇಕ ಎಲ್ಲಾ ಮೇಲ್ಮೈ ವೇದಿಕೆಗಳಲ್ಲಿ ನಿಯೋಜಿಸಲಾಗಿದೆ. ಇದರ ನೀರೊಳಗಿನ ಆವೃತ್ತಿಯನ್ನು ಸಹ ಅಭಿವೃದ್ಧಿಪಡಿಸಲಾಗುತ್ತಿದೆ, ಇದನ್ನು ಭಾರತದ ಜಲಾಂತರ್ಗಾಮಿ ನೌಕೆಗಳು ಮಾತ್ರ ಬಳಸುವುದಲ್ಲದೇ, ಭಾರತದ ಸ್ನೇಹಪರ ವಿದೇಶಿ ರಾಷ್ಟ್ರಗಳಿಗೆ ಕೂಡ ಇದನ್ನು ರಫ್ತು ಮಾಡಲಾಗುವುದು.

## ಅಜೇಯ ಟ್ರಸ್ಟ್

### ಮೈತ್ರೇಯೀ ಗುರುಕುಲಕ್ಕೆ ನೂತನ ಮಕ್ಕಳ ಪ್ರವೇಶಕ್ಕಾಗಿ ಅರ್ಜಿ



ಮೈತ್ರೇಯೀ ಗುರುಕುಲದಲ್ಲಿ 2022–2023ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಧ್ಯಯನ ಮಾಡಬಯಸುವ ಹೆಣ್ಣು ಮಕ್ಕಳಿಗೆ ಅರ್ಜಿಗಳು ದೊರೆಯುತ್ತಿದ್ದು ಆಸಕ್ತರು ಮೈತ್ರೇಯೀ ಗುರುಕುಲದ ವಿಳಾಸಕ್ಕೆ 300/– ರೂಪಾಯಿಗಳ ಮನಿ ಆರ್ಡರ್ (ಸಂಪರ್ಕ, ವಿಳಾಸ ಮತ್ತು ದೂರವಾಣಿ ಸಂಖ್ಯೆಯೊಂದಿಗೆ) ಕಳುಹಿಸಿ ಅರ್ಜಿಯನ್ನು ಪಡೆಯಬಹುದು.

**ಗುರುಕುಲ ಶಿಕ್ಷಣದ ವಿಶೇಷತೆಗಳು**

- ವೇದ–ವೇದಾಂಗ ಇತ್ಯಾದಿ ಶಾಸ್ತ್ರಾಧ್ಯಯನಕ್ಕೆ ವಿಶೇಷ ಆದ್ಯತೆ.
- ಗುರುಕುಲ ಕಲಿಕೆಯ ಅವಧಿ 12 ವರ್ಷಗಳು.
- ವೇದ, ಯೋಗ, ವಿಜ್ಞಾನ, ಕೃಷಿ, ಕಲಾಕೌಶಲವೆಂಬ ಪಂಚಮುಖೀ ಶಿಕ್ಷಣ.
- ಸಂಸ್ಕೃತ ಮಾಧ್ಯಮದಲ್ಲಿ ಕಲಿಕೆ.
- ಆತ್ಮನಿರ್ಭರತೆಯ ಜೀವನ ಶಿಕ್ಷಣ.
- ಸಮಾಜೋಪಯೋಗಿ ವ್ಯಕ್ತಿನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ.
- ಶುಲ್ಕವಿಲ್ಲದೆ ಶಿಕ್ಷಣ, ಆಹಾರ ಮತ್ತು ವಸತಿ ವ್ಯವಸ್ಥೆ.

2021–2022ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 5ನೇ ತರಗತಿ ಮುಗಿಸಿದಂತಹ ಹೆಣ್ಣುಮಕ್ಕಳಿಗೆ ಅವಕಾಶ.

ಸಂಪರ್ಕ ವಿಳಾಸ
**ಕಾರ್ಯಾಲಯ ಕಾರ್ಯದರ್ಶಿ**
ಮೈತ್ರೇಯೀ ಗುರುಕುಲಮ್, ಮೂರುಕಜೆ,
ಕೊಡಂಗಾಯಿ (ಅಂಚೆ)
ಬಂಟ್ವಾಳ (ತಾ), ದ.ಕ – 574243
ದೂರವಾಣಿ –9480574350, 9480266366
E-Mail- maitreyeegurukula@gmail.com
Website-www.maitreyeegurukulam.org

## ಭಾರತದ UPI ಅನ್ನು ಬಳಸುವ ಮೊದಲ ದೇಶವಾಗಲಿದೆ ನೇಪಾಳ

ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (NPCI) ದ ಅಂತಾರಾಷ್ಟ್ರೀಯ ಅಂಗ NPCI ಇಂಟರ್‌ನ್ಯಾಷನಲ್ ಪೇಮೆಂಟ್ಸ್ ನೇಪಾಳದಲ್ಲಿ ಭಾರತದ ಪ್ರಮುಖ ಪಾವತಿ ಪ್ಲಾಟ್‌ಫಾರ್ಮ್ ಯೂನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (UPI) ಅನ್ನು ಆರಂಭಿಲು ಸಜ್ಜಾಗಿದೆ.

ಅಲ್ಲದೆ, ಇದು ನೇಪಾಳ ಮತ್ತು ಭಾರತದ ನಡುವೆ ನೈಜ–ಸಮಯದ ಗಡಿಯಾಚೆಗಿನ P2P ರವಾನೆಗಳನ್ನು ಸಕ್ರಿಯಗೊಳಿಸುತ್ತದೆ. ನೇಪಾಳವು UPI ಅನ್ನು ಅಳವಡಿಸಿಕೊಂಡ ಭಾರತದ ಹೊರಗಿನ ಮೊದಲ ದೇಶವಾಗಿ ಹೊರಹೊಮ್ಮಲಿದೆ.

UPI
UNIFIED PAYMENTS INTERFACE

GPS ನೇಪಾಳದಲ್ಲಿ ಅಧಿಕೃತ ಪಾವತಿ ಸಿಸ್ಟಮ್ ಆಪರೇಟರ್ ಆಗಿದೆ ಮತ್ತು ಮನಮ್ ಇನ್ಫೋಟೆಕ್ ಆ ದೇಶದಲ್ಲಿ ಏಕೀಕೃತ ಪಾವತಿಗಳ ಇಂಟರ್‌ಫೇಸ್ (UPI) ಅನ್ನು ನಿಯೋಜಿಸುತ್ತದೆ.

ಈ ಸಹಯೋಗವು ನೇಪಾಳದ ಕಟ್ಟ ಕಡೆಯ ಗ್ರಾಹಕರಿಗೂ ಬ್ಯಾಂಕ್ ಖಾತೆಗಳು ಮತ್ತು ನೈಜ ಸಮಯದಲ್ಲಿ ವ್ಯಾಪಾರಿ ಪಾವತಿಗಳ ನಡುವೆ ತಕ್ಷಣದ ಪಾವತಿ ವರ್ಗಾವಣೆಯನ್ನು ಚಾಲನೆ ಮಾಡುವ ಮುಕ್ತ ಇಂಟರ್ ಆಪರೇಬಲ್ ಪಾವತಿ ವ್ಯವಸ್ಥೆಯ ಪ್ರಯೋಜನಗಳನ್ನು ಪಡೆದುಕೊಳ್ಳಲು ಅನುವು ಮಾಡಿಕೊಡುತ್ತದೆ.

**ಓದುಗರೇ ಗಮನಿಸಿ**
**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.